**APRIL 30, 2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಭಾರತ, ಅತೀ ದೊಡ್ಡ** ಆರ್ಥಿಕ ಶಕ್ತಿಯಾಗಬೇಕು ಎಂಬುದು, ತಮ್ಮ ಸಂಕಲ್ಪ – ಪ್ರಧಾನಮಂತ್ರಿ ಮೋದಿ.
- **ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಗೈದ,** ಹಿರಿಯರು ಕಟ್ಟಿದ ಪಕ್ಷ ಕಾಂಗ್ರೆಸ್ – ಎ.ಐ.ಸಿ.ಸಿ. ಅಧ್ಯಕ್ಷ – ಮಲ್ಲಿಕಾರ್ಜುನ ಖರ್ಗೆ.
- **ರಾಷ್ಟ್ರಕವಿ ಕುವೆಂಪು ಅವರ,** ವಿಶ್ವಮಾನವ ಚಿಂತನೆ, ಇಂದಿನ ಮಕ್ಕಳಲ್ಲಿ ಬೆಳೆಸಬೇಕು – ಹಿ.ಚಿ. ಬೋರಲಿಂಗಯ್ಯ.
- **ರಾಜ್ಯದ 17 ಜಿಲ್ಲೆಗಳಲ್ಲಿ,** ಮೇ ೨ರ ವರೆಗೆ, ಬಿಸಿಗಾಳಿ ಬೀಸುವ ಸಾಧ್ಯತೆ.

<><><>

**ಈಗ ವಾರ್ತೆಗಳ ವಿವರ**

<><><>

**ಭಾರತ, ವಿಶ್ವದಲ್ಲೇ ಮೂರನೇ ಅತೀ ದೊಡ್ಡ** ಆರ್ಥಿಕ ಶಕ್ತಿಯಾಗಿ, ಹೊರ ಹೊಮ್ಮಬೇಕು ಎಂಬುದು, ತಮ್ಮ ಸಂಕಲ್ಪ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಬಾಗಲಕೋಟೆಯ, ತೋಟಗಾರಿಕೆ ವಿಶ್ವವಿದ್ಯಾಲಯ ಆವರಣದ ಬಳಿಯ, ಮೈದಾನದಲ್ಲಿ ಬಿಜೆಪಿ ಆಯೋಜಿಸಿದ್ದ, 'ವಿಕಸಿಕ ಭಾರತ ವಿಜಯ ಸಂಕಲ್ಪ ಸಮಾವೇಶ'ದಲ್ಲಿ, ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಉಮೇದುವಾರಗೆ ಮೀಸಲಾದ ವಿಜಯಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ರಮೇಶ ಜಿಗಜಿಣಗಿ ಹಾಗೂ ಬಾಗಲಕೋಟೆ ಲೋಕಸಭಾ ಕ್ಷೇತ್ರದ ಉಮೇದುವಾರ, ಪಿ.ಸಿ. ಗದ್ದಿಗೌಡರ ಪರ ಪ್ರಧಾನಮಂತ್ರಿ ಮತ ಯಾಚಿಸಿದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 50 ಸೆಕೆಂದುಗಳು**

<><><>

**ಶಿವಮೊಗ್ಗ ಲೋಕಸಭಾ ಕ್ಷೇತ್ರದ ಎನ್.ಡಿ.ಎ ಅಭ್ಯರ್ಥಿ** ಬಿ.ವೈ.ರಾಘವೇಂದ್ರ ಪರ, ಶಿವಮೊಗ್ಗದಲ್ಲಿ ಜೆ.ಡಿ.ಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಚಾರ ನಡೆಸಿದರು.

**ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ಎದುರಾಗಿದ್ದು,** ಸಮರ್ಥವಾಗಿ ನಿಭಾಯಿಸುವ ಬದಲು, ನಿತ್ಯವೂ ರಾಜ್ಯ ಸರ್ಕಾರ, ಕೇಂದ್ರದೊಂದಿಗೆ ಸಂಘರ್ಷಕ್ಕಿಳಿಯುತ್ತಿದೆ ಎಂದು, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಹೇಳಿದರು.

<><><>

**ಯಾದಗಿರಿ ಜಿಲ್ಲೆ ಗುರುಮಠಕಲ್ ಪಟ್ಟಣದಲ್ಲಿ,** ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ, 'ಪ್ರಜಾ ಧ್ವನಿ ಸಮಾವೇಶದಲ್ಲಿ, ಕಲಬುರ್ಗಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ರಾಧಾಕೃಷ್ಣ ದೊಡ್ಡಮನಿ ಪರ, ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಲಬುರಗಿ ಜಿಲ್ಲೆ ಸೇಡಂನಲ್ಲಿ, ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತಯಾಚಿಸಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಗೈದ ಹಿರಿಯರು ಕಟ್ಟಿದ ಪಕ್ಷ ಕಾಂಗ್ರೆಸ್ ಎಂದ ಅವರು, ಪ್ರಧಾನಮಂತ್ರಿ ಮೋದಿ ಹಾಗೂ ಅವರು ಕೈಗೊಂಡ ಕ್ರಮಗಳನ್ನು ಆಲೋಚಿಸಿದರು.

<><><>

**ತೆಲಂಗಾಣಾ ಮುಖ್ಯಮಂತ್ರಿ ರೇವಂತ್ ರೆಡ್ಡಿ** ಅವರು ಮಾತನಾಡಿ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು, ದೇಶಾದ್ಯಂತ ನ್ಯಾಯ ಯಾತ್ರೆ ಮಾಡಿ, ದೇಶದ ಸಂಕಷ್ಟ ಮತ್ತು ಜನರ ಸಮಸ್ಯೆ ಆಲಿಸಿದ್ದಾರೆ; ದೇಶದ ಸುರಕ್ಷತೆಗಾಗಿ ಕಾಂಗ್ರೆಸ್ ಬದ್ಧವಿದೆ ಎಂದರು.

<><><>

**ವಿಜಯನಗರ ಜಿಲ್ಲೆ ಕೂಡ್ಲಿಗಿಯ,** ಮೈಲಾರ ಮಹದೇವ ಕ್ರೀಡಾಂಗಣದಲ್ಲಿ, ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ, ಪಕ್ಷದ ಅಭ್ಯರ್ಥಿ ಇ.ತುಕರಾಂ ಪರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತಯಾಚಿಸಿದರು. ತುಂಗಭದ್ರಾ ಜಲಾಶಯದ ಹೂಳಿನ ಸಮಸ್ಯೆ ನಿವಾರಣೆಗೆ, ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ, ಸರ್ಕಾರ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯದ ಮುಖ್ಯಮಂತ್ರಿಯವರ ಜೊತೆ ಸಮಾಲೋಚಿಸಲಿದೆ ಎಂದರು.

<><><>

**ರಾಜ್ಯದಲ್ಲಿ ಕಾಂಗ್ರೆಸ್‌ಗೆ ಉತ್ತಮ ಸ್ಪಂದನೆ** ವ್ಯಕ್ತವಾಗುತ್ತಿದ್ದು, ಜನರಿಂದ ಬೆಂಬಲ ದೊರೆಯುವ ನಿರೀಕ್ಷೆ ಇದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಚಾಮರಾಜನಗರ ಜಿಲ್ಲೆ,** ಹನೂರು ತಾಲೂಕಿನ ಇಂಡಿಗನತ್ತ ಗ್ರಾಮದಲ್ಲಿ ಮರು ಮತದಾನ ಸೋಮವಾರ ಜರುಗಿತು. 39 ಮಹಿಳೆಯರು ಹಾಗೂ 32 ಪುರುಷರು ಸೇರಿದಂತೆ, ಕೇವಲ ಶೇಕಡ 13 ದಶಾಂಶ 4–5 ರಷ್ಟು ಮತದಾನವಾಗಿದೆ.

<><><>

**ಧಾರವಾಡ ಜಿಲ್ಲಾ ಚುನಾವಣಾಧಿಕಾರಿ,** ದಿವ್ಯಾ ಪ್ರಭು ನಗರದ ಗೊಲ್ಲರ ಕಾಲೋನಿ, ಮೇದಾರ ಓಣಿ ಮುಂತಾದ ಪ್ರದೇಶಗಳ ಮನೆಮನೆಗೆ ಭೇಟಿ ನೀಡಿ, ಮತದಾರರಿಗೆ 'ವೋಟರ್ಸ್ ಸ್ಲಿಪ್' ತಲುಪಿರುವ ಬಗ್ಗೆ' ಖಚಿತ ಪಡಿಸಿಕೊಂಡರು.

<><><>

**ಬೆಳಗಾವಿ ಜಿಲ್ಲೆ ಚುನಾವಣಾಧಿಕಾರಿ** ನಿತೇಶ್ ಪಾಟೀಲ, ಮತದಾರರಿಗೆ ಮುಂಚಿತವಾಗಿ ಮತದಾರ ಚೀಟಿ ತಲುಪಿಸುವಂತೆ, ಸೂಚಿಸಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆ,** ಕಾರವಾರ ತಾಲೂಕಿನ, ಮಾಜಾಳಿ ಚೆಕ್‌ಪೋಸ್ಟ್ ಗೆ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ಭೇಟಿ ನೀಡಿ ಪರಿಶೀಲಿಸಿದರು.

<><><>

**ಶಿವಮೊಗ್ಗ ಮತದಾರ ಜಾಗೃತಿ** ವೇದಿಕೆ ಏರ್ಪಡಿಸಿದ್ದ, ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯ್ತಿ, ಸಿ.ಇ.ಓ. ಸ್ನೇಹಲ್ ಸುಧಾಕರ್ ಲೋಖಂಡೆ ಚಾಲನೆ ನೀಡಿದರು.

<><><>

**ಶಿವಮೊಗ್ಗ ಕಲಾವಿದ ಸತೀಶ ಪುರಪ್ಪೆಮನೆ** ಹಾಗೂ ತಂಡ ಸಿದ್ಧ ಪಡಿಸಿದ, ಚುನಾವಣಾ ಮಾದರಿ, ಸಿಟಿ ಸೆಂಟರ್ ಮಾಲ್‌ನಲ್ಲಿ ಎಲ್ಲರ ಗಮನ ಸೆಳೆಯುವಂತಿದೆ.

<><><>

**ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲೂಕು** ಸ್ವೀಪ್ ಸಮಿತಿ ಆಯೋಜಿಸಿದ್ದ, ಮತದಾನ ಜಾಗೃತಿ ಅಭಿಯಾನಕ್ಕೆ, ತಾಲೂಕು ಪಂಚಾಯಿತಿ ಅಧಿಕಾರಿ ರವಿಕುಮಾರ್ ಹಸಿರು ಧ್ವಜ ತೋರಿದರು.

<><><>

**ಅಂತಾರಾಷ್ಟ್ರೀಯ ಕ್ರೀಡಾಪಟು** ಹಾಗೂ ವಿಜಯಪುರ ಸ್ವೀಪ್ ರಾಯಬಾರಿ, ರಾಜೇಶ್ ಪವಾರ್, ಆಕಾಶವಾಣಿ ಮೂಲಕ, ಕಡ್ಡಾಯವಾಗಿ ಮತ ಚಲಾಯಿಸುವಂತೆ ಮನವಿ ಮಾಡಿದ್ದಾರೆ.

<><><>

**ಕ್ರೀಡಾಪಟು ರಾಜೇಶ್ ಪವಾರ್ ಧ್ವನಿ 26 ಸೆಕೆಂದುಗಳು**

<><><>

**ನಾಡೋಜ ಎಚ್.ಎಲ್. ನಾಗೇಗೌಡ** ಕಲಾ ಶಾಲೆಯ ಆಶ್ರಯದಲ್ಲಿ, ಗ್ರಾಮ್ಯ ವಿಕಾಸ ಶಿಬಿರವನ್ನು, ಮಕ್ಕಳಿಗಾಗಿ ನಡೆಸಲಾಗುತ್ತಿದೆ ಎಂದು, ರಾಜ್ಯ ಜಾನಪದ ಪರಿ ‘ತ್ ಕಾರ್ಯಾಧ್ಯಕ್ಷ ಪ್ರೊಫೆಸರ್ ಹಿ.ಚಿ. ಬೋರಲಿಂಗಯ್ಯ ತಿಳಿಸಿದ್ದಾರೆ. ರಾಮನಗರದ ಜಾನಪದ ಲೋಕದಲ್ಲಿ, 12 ದಿನಗಳ ಮಕ್ಕಳ ಗ್ರಾಮ್ಯ ವಿಕಾಸ ಶಿಬಿರವನ್ನು ಉದ್ಘಾಟಿಸಿ, ಮಾತನಾಡಿದರು. ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಚಿಂತನೆಯನ್ನು, ಇಂದಿನ ಮಕ್ಕಳಲ್ಲಿ ಬೆಳೆಸಬೇಕು ಎಂದರು. ಜಾನಪದ ಲೋಕದ ಸಂರಕ್ಷಕ ಡಾಕ್ಟರ್ ಯು. ಎಂ. ರವಿ ಮಕ್ಕಳಿಗೆ ಶಿಶು ಪ್ರಾಸಗಳನ್ನು ಹೇಳಿಕೊಟ್ಟರು.

<><><>

## ನಿಧನ ವಾರ್ತೆ

<><><>

**ಸೋಮವಾರ ಬೆಂಗಳೂರಿನಲ್ಲಿ ನಿಧನರಾದ,** ಹಿರಿಯ ರಾಜಕಾರಣಿ, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಸಕಲ ಸರ್ಕಾರಿ ಗೌರವಗಳೊಂದಿಗೆ ಇಂದು ಮಧ್ಯಾಹ್ನ, ಬೌದ್ಧ ಸಂಪ್ರದಾಯದಂತೆ, ಮೈಸೂರಿನ ಸಿಲ್ಕ್ ಫ್ಯಾಕ್ಟರಿ ಬಳಿಯ, ಡಾಕ್ಟರ್ ಅಂಬೇಡ್ಕರ್ ಟ್ರಸ್ಟ್ ಆವರಣದಲ್ಲಿ ನೆರವೇರಲಿದೆ ಎಂದು, ಅವರ ಪುತ್ರಿ ಪ್ರತಿಮಾ ಪ್ರಸಾದ್ ತಿಳಿಸಿದ್ದಾರೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಪ್ರಧಾನಮಂತ್ರಿ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಮೃತ ಗೌರವಾರ್ಥ ಇಂದು,** ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಶಾಲೆ, ಕಾಲೇಜು ಹಾಗೂ ಸರ್ಕಾರಿ ಕಚೇರಿಗಳಿಗೆ ರಜೆ ಘೋಷಿಸಲಾಗಿದೆ. ಪೂರ್ವ ನಿಗದಿತ ಪರೀಕ್ಷೆಗಳು ಮಾತ್ರ ನಡೆಯಲಿವೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನಲ್ಲಿ ತಿಳಿಸಿದ್ದಾರೆ.

<><><>

**ಮಾಜಿ ಉಪ ಮುಖ್ಯಮಂತ್ರಿ, ದಿವಂಗತ** ಎಂ.ಪಿ. ಪ್ರಕಾಶ್ ಅವರ ಪತ್ನಿ ಎಂ.ಪಿ. ರುದ್ರಾಂಬಾ, ವಿಜಯನಗರ ಜಿಲ್ಲೆ ಹೂವಿನ ಹಡಗಲಿಯಲ್ಲಿ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಇಂದು ಮಧ್ಯಾಹ್ನ 3 ಗಂಟೆಗೆ ಹೂವಿನ ಹಡಗಲಿಯಲ್ಲಿ ಅಂತ್ಯಕ್ರಿಯೆ ಜರುಗಲಿದೆ. ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

**ರಾಜ್ಯದ 17 ಜಿಲ್ಲೆಗಳಲ್ಲಿ,** ಮೇ 2, ಗುರುವಾರದ ವರೆಗೆ, ಬಿಸಿಗಾಳಿ ಬೀಸುವ ಮುನ್ನೆಚ್ಚರಿಕೆಯನ್ನು, ಹವಾಮಾನ ಇಲಾಖೆ ನೀಡಿದೆ. ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ, ಕೊಪ್ಪಳ, ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಜನರಿಗೆ, ಬಿಸಿಗಾಳಿ ಬೀಸುವ ಎಚ್ಚರಿಕೆ ನೀಡಲಾಗಿದೆ.

<><><>

**ಕರಾವಳಿ ಜಿಲ್ಲೆಗಳಾದ ಉತ್ತರಕನ್ನಡ,** ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲೂ ಉ ಣ್ಣಂಶ ಗರಿ ್ಠ ಮಟ್ಟ ತಲುಪಲಿದೆ ಎಂದು, ಹವಾಮಾನ ಇಲಾಖೆ ಬೆಂಗಳೂರು ಕೇಂದ್ರದ ನಿರ್ದೇಶಕ, ಸಿ.ಎಸ್.ಪಾಟೀಲ್ ತಿಳಿಸಿದ್ದಾರೆ. ಇಂದಿನಿಂದ, ಕೆಲವು ಜಿಲ್ಲೆಗಳಲ್ಲಿ ಹಗುರ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ವರದಿ ತಿಳಿಸಿದೆ.

<><><>

**43 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ,** ರಾಯಚೂರಿನಲ್ಲಿ ನಿನ್ನೆ ದಾಖಲಾಗಿದೆ.

<><><>

**ಸೋಮವಾರದಿಂದ ರಾಜ್ಯಾದ್ಯಂತ ಆರಂಭಗೊಂಡ,** ದ್ವಿತೀಯ ಪಿಯುಸಿ 2ನೇ ವಾರ್ಷಿಕ ಪರೀಕ್ಷೆಗಳು, ಮೇ 12ರ ವರೆಗೆ ನಡೆಯಲಿವೆ. ಸೋಮವಾರ ಕನ್ನಡ ವಿ ‘ಯದ ಪರೀಕ್ಷೆ ನಡೆಯಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಭಾರತ, ಅತೀ ದೊಡ್ಡ** ಆರ್ಥಿಕ ಶಕ್ತಿಯಾಗಬೇಕು ಎಂಬುದು, ತಮ್ಮ ಸಂಕಲ್ಪ – ಪ್ರಧಾನಮಂತ್ರಿ ಮೋದಿ.
- **ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಗೈದ,** ಹಿರಿಯರು ಕಟ್ಟಿದ ಪಕ್ಷ ಕಾಂಗ್ರೆಸ್ – ಎ.ಐ.ಸಿ.ಸಿ. ಅಧ್ಯಕ್ಷ – ಮಲ್ಲಿಕಾರ್ಜುನ ಖರ್ಗೆ.
- **ರಾಷ್ಟ್ರಕವಿ ಕುವೆಂಪು ಅವರ,** ವಿಶ್ವಮಾನವ ಚಿಂತನೆ, ಇಂದಿನ ಮಕ್ಕಳಲ್ಲಿ ಬೆಳೆಸಬೇಕು – ಹಿ.ಚಿ. ಬೋರಲಿಂಗಯ್ಯ.
- **ರಾಜ್ಯದ 17 ಜಿಲ್ಲೆಗಳಲ್ಲಿ,** ಮೇ 2ರ ವರೆಗೆ, ಬಿಸಿಗಾಳಿ ಬೀಸುವ ಸಾಧ್ಯತೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**